ನಾವು ಜನಸಂಘದವರು, ಎಂದು ಹೇಳಿಕೊಳ್ಳುತ್ತಿದ್ದಾರೆ. ಅವನ್ನೆಲ್ಲಾ ನಾವು ನೋಡಿದ್ದೇವೆ. ಅವರು ಅವರವರ ಪಕ್ಷಗಳ ಪರವಾಗಿ ಏನೇನೋ ಹೇಳಿಕೊಳ್ಳುವುದಕ್ಕೋಸ್ಕರ ಮಾತನಾಡುತ್ತಿದ್ದಾರೆಂದು ನನಗೆ ಅನುಮಾನ ಬರುತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದರಲ್ಲಿಯೂ ನೀವು ಗೆದ್ದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಯಾವುದಾದರೂ ಒಂದು ಪಾರ್ಟಿ ವಿಷಯವಾಗಿ ಮಾತನಾಡುವಾಗ ಆ ಪಾರ್ಟಿಗೆ ಸಂಬಂಧಪಟ್ಟ ಸದಸ್ಯರು ಈ ಸಭೆಯಲ್ಲಿ ಇದ್ದಾಗ್ಗೆ ಮಾತನಾಡಬೇಕಾಗಿತ್ತು. ಅವರ ಗೈರುಹಾಜರಿಯಲ್ಲಿ ಆ ರೀತಿ ಮಾತನಾಡಬಾರದು.

ಶ್ರೀ ಡಿ. ದೇವರಾಜ್ ಅರಸ್.—ಅದೇನೂ ಇಲ್ಲ. ಅವರು ಈ ಸಭೆಯಲ್ಲಿದ್ದಾಗಲೂ ಕೂಡ ನಾನು ಆ ರೀತಿ ಮಾತನಾಡುತ್ತೇನೆ. ಒಟ್ಟಿನಲ್ಲಿ ಆ ರೀತಿಯಾಗಿ ಅವರು ಮಾತನಾಡಿದ್ದು ಖಂಡನೀಯವಾದುದೆಂದು ಹೇಳುತ್ತೇನೆ. ಈ ಮಾನ್ಯ ಸಭೆಯು ನಿನ್ನೆ ಸರ್ವಾನುಮತದಿಂದ ಒಪ್ಪಿರುವ ವಿಚಾರವನ್ನು ಪುನಃ ಇವತ್ತು ಚರ್ಚೆಗೆ ತೆಗೆದುಕೊಂಡು ಪರಿಶೀಲನೆಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಯಾವ ಕಾನೂನೂ ಸಹ ಇಲ್ಲ ಅವಕಾಶವೂ ಇಲ್ಲ ಮತ್ತು ಅದಕ್ಕೆ ಈ ಸಭೆ ಒಪ್ಪತಕ್ಕದ್ದೂ ಆಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರ ವಿಷಯದ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗಬೇಕು. ಅದಕ್ಕೆ ತಾವು ಜಾಗ್ರತೆಯಾಗಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಅದನ್ನು ಆಮೇಲೆ ತೆಗೆದುಕೊಳ್ಳೋಣ. The matter is closed now. Mr. Chandrashekhar to continue further discussion on the Bill.

Mysore Land Reforms (Amendment) Bill, 1972—Motion to Consider [Debate Continued]

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ನಿನ್ನೆ ನಾನು ಮಾತನಾಡುವಾಗ ಈ ಭೂಸುಧಾರಣೆಯ ಕಾನೂನು ಸದನದ ಮುಂದೆ ಬಂದಮೇಲೆ ಅನೇಕ ತರಹ ವೇಷಭೂಷಣಗಳು ಪ್ರಾರಂಭವಾಗಿವೆಯೆನ್ನುವುದನ್ನು ಹೇಳುತ್ತಿದ್ದೆ. ಈ ಸಭೆಯ ನಾಯಕರಾಗಿರುವವರು ಇಂತಹ ಬೆದರಿಕೆಗೆ ಅಂಜಬೇಕಾದ ಪ್ರಮೇಯವೇನೂ ಇಲ್ಲ.

ಶ್ರೀ ಎಚ್. ಡಿ. ದೇವೆಗೌಡ.—ತಾವು ಮೊದಲನಿಂದಲೂ ಅಜೆಂಡಾ ಪ್ರಕಾರ ಈ ಸಭೆಯ ಕಾರ್ಯಕಲಾಪಗಳು ನಡೆಯಬೇಕೆಂದು ಹೇಳಿದ್ದೀರಿ. ಅಜೆಂಡಾದಲ್ಲಿ ಕಾರ್ಯಕ್ರಮದ ಪಟ್ಟಿ ಏನಿದೆಯೋ ಅದರ ಪ್ರಕಾರ ಲ್ಯಾಂಡ್ ರಿಫಾರಮ್ಸ್ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಅದು ಮುಗಿಯುವುದಕ್ಕೆ ಇನ್ನೂ 10-12 ದಿವಸಗಳಾದರೂ ಬೇಕಾಗುತ್ತದೆ. ಈಗ ನಾವು ಕಳುಹಿಸಿರತಕ್ಕ ಅಲ್ಪ ಕಾಲಾವಧಿಯ ಚರ್ಚೆಗೆ ರೂಲ್ 15ರ ಪ್ರಕಾರ ಸುಮಾರು 2½ ಅಥವಾ ಮೂರು ಗಂಟೆಗಳಾದರೂ ಅವಕಾಶ ಬೇಕಾಗುತ್ತದೆ. ಆದ್ದರಿಂದ ತಾವು ಈ ಚರ್ಚೆಯನ್ನು ಇವತ್ತು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು. ಈಗಾಗಲೇ 2-30 ಗಂಟೆಯಾಗಿದೆ.

ಅಧ್ಯಕ್ಷರು.—ಆ ಚರ್ಚೆಯನ್ನು ಇವತ್ತು 3½ ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾಯಕರಾಗಿರುವವರು ಈ ಗೋಮುಖ ವ್ಯಾಘ್ರಗಳ ಬೆದರಿಕೆಗೆ ಏನೂ ಹೆದರಬೇಕಾಗಿಲ್ಲ. ಈ ದೇಶದ ಜನ ನಾವು ಇವತ್ತು ಏನು ನೀತಿಯನ್ನು ಹಾಕಿಕೊಂಡಿದ್ದೇವೋ ಅದಕ್ಕೆ ಬೆಂಬಲ ಕೊಟ್ಟು ಅಣುವಾಗಿ ಆಸ್ತಿಭಾರವಾಗಿ ನಿಂತುಕೊಂಡಿದ್ದಾರೆ. ನಮ್ಮ ನಿಲುವು ಯಾಪರೀತಿಯಲ್ಲಿ ಹೋಗುತ್ತಿದೆಯೆಂಬುದನ್ನು ಕಾದು ನೋಡುತ್ತಿದ್ದಾರೆ. ಅಂದಮೇಲೆ ಪ್ರಗತಿಪರವಾಗಿ ವಿಚಾರಮಾಡತಕ್ಕ ಪ್ರತಿಯೊಬ್ಬ ವಿಧಾನಸಭಾ ಸದಸ್ಯರೂ ಹಾಗೂ ಈ ದೇಶದ ಜನರೂ ಕೂಡ ಇವತ್ತು ಈ ಭೂಸುಧಾರಣೆ ಏನಿದೆಯೋ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಅನೇಕ ಶತಮಾನಗಳಿಂದ ಯಾವನಿಗೆ ಒಂದು ಇಂಚು ನೆಲವಿಲ್ಲವೋ, ಯಾವನಿಗೆ ಏನೂ ಆಸ್ತಿ ಇಲ್ಲವೋ ಅಂತಹವನು ಆಸ್ತಿಯನ್ನು ಪಡೆಯತಕ್ಕ ಕಾಲವನ್ನು ಕಾದು ನೋಡುತ್ತಿರುತ್ತಾನೆ. ಅಂತಹವನು ನಿಜವಾಗಿ ನಾವು ಏನು ಮಾಡುತ್ತೇವೆ ಎಂಬುದನ್ನು ಯಾವಾಗಲೂ ನಿರೀಕ್ಷಣೆ ಮಾಡುತ್ತಿರುತ್ತಾನೆಂಬ ಮಾತನ್ನು ನಾವು ಸದಾಕಾಲದಲ್ಲಿಯೂ ನೆನಪಿನಲ್ಲಿಟ್ಟು

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಕೊಳ್ಳಬೇಕಾಗಿದೆ. ಇಂದು ಇವತ್ತು ಸ್ಟ್ಯಾಂಡರ್ಡ್ ಎಕರೆಯ ಬಗ್ಗೆ ಬಹಳ ಗುದ್ದಾಟವಿದೆ. ಈ ಸ್ಟ್ಯಾಂಡರ್ಡ್ ಎಕರೆಯನ್ನು ನಿಗದಿಮಾಡುವುದೇ ಉತ್ಪತ್ತಿಯ ದೃಷ್ಟಿಯಿಂದಲ್ಲ. ಈ ದೇಶದಲ್ಲಿ ಸಂಪತ್ತು, ಐಶ್ವರ್ಯ ಭೂಮಿ ಇವರ ಮೇಲೆ ಮನುಷ್ಯನ ಬಾಳನ್ನು ಅಳೆಯುತಕ್ಕದ್ದಾಗಿವೆ. ಇದರ ಒಂದು ಸಂಸ್ಕೃತಿ ನನಗೆ ಗೊತ್ತಿದೆ. ಈ ಸಭೆಯ ಸದಸ್ಯರಿಗೂ ಗೊತ್ತಿದೆ. ಯಾವ ಮನುಷ್ಯನೇ ಆಗಲೀ ಅವನು ಒಬ್ಬ ದೊಡ್ಡ ಮನುಷ್ಯನಾಗಬೇಕಾದರೆ, ಅವನ ಆಸ್ತಿ, ಅವನಲ್ಲರತಕ್ಕ ಬಂಗಾರದಿಂದ ಎಂದು ಕೆಲವರು ಹೇಳ್ತಾರೆ. ಅವನಲ್ಲರತಕ್ಕ ಪ್ರತಿಭೆಯಿಂದಾಗಲೀ, ಅವನಲರತರತಕ್ಕ ಯೋಗ್ಯತೆಯಿಂದಾಗಲೀ ನೀತಿಯಿಂದಾಗಲೀ, ಈ ಯಾವುದರಿಂದಲೂ ಅವನಿಗೆ ಫಲ ಕೊಟ್ಟಿಲ್ಲ. ಅವನಿಗೆ ಆ ಒಂದು ಫಲ ದೊರಕಬೇಕಾದರೆ, ದುಡಿಮೆಗೆ ಇರತಕ್ಕ ಭೂಮಿಯಿಂದಲೇ ಎಂದು ಹೇಳಬೇಕಾಗಿದೆ. ಅಂದಮೇಲೆ ಎಷ್ಟು ಎಕರೆ ಜಮೀನು ಅವನಿಗೆ ಇರಬೇಕೆಂಬ ಬಗ್ಗೆ ಮಾಡಿರತಕ್ಕ ಮಾಪಕ, ಅಳತೆಗೋಲಿನ ದೃಷ್ಟಿ ಸರಿಯಾಗಿಲ್ಲ ಇದರಿಂದಲೇ ಅವನಿಗೆ ಬಹಳ ಹಿಂಸೆಯಾಗಿದೆ. ಹಾಗೂ ಉತ್ಪತ್ತಿ ಕಡಿಮೆಯಾಗಿದೆ. ಸಾಮಾನ್ಯವಾಗಿ ಒಂದು ಕುಟುಂಬ ಜೀವನ ಮಾಡುವುದಕ್ಕೆ ಕೇವಲ 10ರಿಂದ 18 ಎಕರೆಯವರೆಗೆ ಜಮೀನು ಇರಬೇಕು. ಗೋಮುಖ ವಾಘ್ರದ ನೀತಿಯನ್ನು ಹೊಂದಿ ಕೊಂಡಿರುವವರು ಇದರ ಬಗ್ಗೆ ಒಂದು ಹೋರಾಟವನ್ನು ಈಗ ನಡೆಸುತ್ತಿದ್ದಾರೆ. ಯಾವಾಗಲೂ ಸ್ವತಃ ರೈತನಿಗಿಂತ ರೈತರ ಹಿತಚಿಂತನೆ ಮಾಡುವ ಜನರೇ ಈಗ ಸುಮ್ಮನೆ ಕೂಗು ಎಬ್ಬಿಸುತ್ತಿದ್ದಾರೆ. ಏಕೆಂದರೆ, ರೈತನಾದವನು ನಿಜವಾಗಿಯೂ ಇವತ್ತಿನದಿವಸ ವಿಧಾನ ಸಭೆಯ ಮುಂದಾಗಲೀ, ಅಥವಾ ಮಾನ್ಯ ಮುಖ್ಯಮಂತ್ರಿಯವರ ಮುಂದಾಗಲೀ ಬರುವುದಿಲ್ಲ. ಅವನು ವಿಧಾನಸೌಧದ ಮುಂದೆ ಪ್ರದರ್ಶನ ಮಾಡತಕ್ಕ ಧೈರ್ಯವನ್ನೂ ಸಹ ಮಾಡಲಾರ. ಅವನಿಗೆ ಬೆಂಗಳೂರಿಗೆ ಬರುವ ಶಕ್ತಿಯೂ ಸಹ ಇರುವುದಿಲ್ಲ. ಕಚೇರಿಗಳಿಗೆ ಕಾಗದ ಬರೆಯುವ ಯೋಗ್ಯತೆಯೂ ಸಹ ಇರುವುದಿಲ್ಲ. ಆದ್ದರಿಂದ ಕೇವಲ ಸ್ಕೇಕಡ 2ರಷ್ಟು ಇರುವ ಜನರೇನಿದ್ದಾರೆ ಆ ಜನ ಈಗ ಇದರ ಬಗ್ಗೆ ಗುಲ್ಲು, ಕೂಗು ಎಬ್ಬಿಸಿರುವುದಾಗಿದೆ. ಆದ್ದರಿಂದ ನಿಜವಾಗಿ ಅಂತಹ ಜನರ ಬಗ್ಗೆ ಕನಿಕರ, ಅನುಕಂಪ ತೋರಿಸಬೇಕೆ, ಬೇಡವೇ ಎನ್ನುವ ವಿಚಾರವನ್ನು ಪ್ರಜಾಪ್ರತಿನಿಧಿಗಳಾಗಿ ನಾವು ಕೂಲಂಕಷವಾಗಿ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಎಷ್ಟು ಎಕರೆ ಇಡಬೇಕೆಂಬುದರ ಬಗ್ಗೆ ನಾವು ಗುದ್ದಾಟ ಮಾಡುತ್ತಿರುವುದರಿಂದ ಆದಷ್ಟು ಕಾಲಹರಣ ಮಾಡಿದ ಹಾಗೆ ಆಗುತ್ತದೆ. ಯಾವಾಗ ನಾವು ಭೂಮಿಯನ್ನು ಉಳುವವನಿಗೆಯೇ ಕೊಡಬೇಕೆಂದು ಏನುಹೇಳುತ್ತಿದ್ದೇವೋ, ಆದನ್ನು ಸಾಧಿಸಬೇಕಾದರೆ ಯಾರ್ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೋ, ಅವರಿಗೆ ಅದನ್ನು ಕೊಡಬೇಕು. ನಾವು ಇಂತಹ ತಾರೀಕಿನ ಒಳಗೆ ಅಂಥ ಭೂಮಿಗಳನ್ನು ಉಳುವವರಿಗೆ ಕೊಡುತ್ತೇವೆಂಬ ಒಂದು ನೀತಿಯನ್ನು ಹಾಕಿಕೊಂಡಿದ್ದರೆ ಚೆನ್ನಾಗಿತ್ತು. ಮೊನ್ನೆ ಮಳೆಗಾಲದ ಅಧಿವೇಶನ ಮುಗಿದ ನಂತರ ನಾವು ಊರಿನಲ್ಲಿದ್ದಾಗ ಕೆಲವು ಕಡೆ ಬಡವರಿಗೆ ಸೈಟುಗಳನ್ನು ಹಂಚತಕ್ಕ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದರು. ಆ ಕಾರ್ಯವನ್ನು ನಮ್ಮ ಮೂಲಕ ಮಾಡಿಸುತ್ತಿದ್ದರು. ಆ ಸಂದರ್ಭದಲ್ಲಿ ಕೇವಲ ಒಂದು 10 ಗುಂಟೆ ಭೂಮಿಯನ್ನು ಬಡ ಜನರಿಗೆ ಹಂಚುವಾಗ, ಅವರಿಗೆ ಸಕಲ ಐಶ್ವರ್ಯವೇ ಸಿಕ್ಕಿದ ಹಾಗೆ ಭಾವವಾಗಿ ಒಪ್ಪೊಂದು ಸಂತೋಷ ಪಡುತ್ತಿದ್ದರು. ಆಂದಾಗ ಜಗತ್ತಿನಲ್ಲಿ ಅವರಿಗೆ ತನ್ನದು ಎನ್ನತಕ್ಕಂತಹ ವಸ್ತು ಇದೆಯೇ; ಇಲ್ಲವೇ ಮತ್ತು ಅದು ಸಿಗುತ್ತದೆಯೇ ಇಲ್ಲವೇ ಎನ್ನತಕ್ಕಂತಹ ಭಾವನೆ ಅವರಲ್ಲಿ ಇದೆ. ಅಂಥ ಜನರಿಗೆ ಒಂದು 10 ಗುಂಟೆ ಜಮೀನು ಕೊಟ್ಟಾಗ ಅವರಿಗೆ 10 ಲಕ್ಷರೂಪಾಯಿ ಸಿಕ್ಕಿದಷ್ಟು ಸಂತೋಷವಾಗಿದೆ. ಆದ್ದರಿಂದ ಇವತ್ತು ಯಾರು ಯಾರು ಯಾವ್ಯಾವ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ, ಅಂಥ ಜಮೀನುಗಳನ್ನು ಆ ಜನರಿಗೆ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ. ಪುನಃ ಈ ಒಂದು ಕಾನೂನು ಮಾಡಿ ಇದು ಲಾಯರ್ಸ್ ಪೆರಡೈಸ್ ಆಗುವ ಕಾನೂನನ್ನಾಗಿ ಮಾಡಿದರೆ ಅದು ಬರೇ ಹಾಸ್ಯಾಸ್ಪದವಾಗುತ್ತದೆ. ಇದರಲ್ಲಿ ಏನು ಕಂಪೆನ್ಸೇಶನ್ ಕೊಡಬೇಕು, ಹೇಗೆ ತೀರ್ಮಾನ ಮಾಡಬೇಕು ಎಂಬುದನ್ನು ಬಹಳ ಸುಲಭವಾಗಿ ನಾವೇ ತೀರ್ಮಾನ ಮಾಡಬಹುದು. ಹಿಂದೆಯಾದರೂ 'ಫೇರ್ ರೆಂಟ್' ಎನ್ನುವ ಒಂದು ತೊಡಕು ಇತ್ತು. ಈಗ ಇಂತಿಷ್ಟು ಪಟ್ಟು ಗೇಣಿ ಎಂದು ನಿರ್ಣಯ ತೆಗೆದುಕೊಂಡಿದ್ದಾರೆ. ಇದು ಕೋರ್ಟಿನ ಮುಂದೆ ಸಹ ಹೋಗಬೇಕಾದ್ದು ಏನೂ ಇಲ್ಲ. ಕಂದಾಯದ ಇಂತಿಷ್ಟು ಗೇಣಿ ಎಂದು ಇದೆ; ಒಡೆಯನಿಗೆ ಉತ್ಪನ್ನದ ಇಂತಿಷ್ಟು ಭಾಗ ಎಂದು ಸಹ ಇದೆ. ಇವೆಲ್ಲ ಇರುವಾಗ ನಾವೇ ಇದನ್ನು ಸುಲಭವಾಗಿ ಬಗೆಹರಿಸಬಹುದು. ನಾವು ಈ ವಿಧಾನ ಸಭೆಯ ಅಧಿವೇಶನ ಮುಗಿದ ತಕ್ಷಣ ಈ ಒಂದು ಬೃಹದಾಕಾರವಾಗಿ ಬೆಳೆದು ನಿಂತ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮಾರ್ಗ ಇದೆ. ಅಲ್ಲದೆ ಆ ರೀತಿ ಮಾಡುವುದರಿಂದ ಈ ಭೂಸುಧಾರಣಾ ಕಾನೂನು ಪುಸ್ತಕದ ಬದನೆಕಾಯಿ

ಎನ್ನುವ ಆಪಾದನೆ ಏನಿದೆ, ಅದನ್ನು ಬಗೆಹರಿಸಿದ ಹಾಗೆ ಆಗುತ್ತದೆ. ಎರಡನೆಯ ಪ್ರಶ್ನೆ ಸ್ವಾಧೀನದ ಪ್ರಶ್ನೆ. ಇವೊತ್ತಿನ ದಿವಸ ಸಂಪ್ರದಾಯ ರೀತಿಯಲ್ಲಿ ಸ್ವಾಧೀನತೆಯನ್ನು ನಿರ್ಣಯ ಮಾಡುವುದಾದರೆ ಅದು ಪಹಣಿಯ ಆಧಾರದ ಮೇಲೆ. ಆದರೆ ಆ ಪಹಣಿಯ ಗತಿಯೋ ದೇವರೇಗತಿ ಇವತ್ತಿಗೂ ಕೆಲವು ಶ್ಯಾನುಭೋಗರು ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಕೂತುಕೊಂಡು ಪಹಣಿ ಬರೆಯುವ ರಿವಾಜು ಇದೆ. ಉದಾಹರಣೆಗೆ ರಾಮಣ್ಣ ಸಾಗುವಳಿ ಮಾಡಿದರೆ, ಕಾಳಣ್ಣನ ಹೆಸರಿನಲ್ಲಿ ಪಹಣಿ ಇರುತ್ತದೆ. ಒಬ್ಬ ರೈತ 25-30 ವರ್ಷ ದುಡಿದು, ಗೇಣಿ ಕೊಡುತ್ತಿದ್ದರೂ, ಅವನ ಹೆಸರಿನಲ್ಲಿ ಪಹಣಿ ಇರುವುದಿಲ್ಲ. ಆದ್ದರಿಂದ ಇವತ್ತು ನೀವು ಕೇವಲ ಪಹಣಿಯ ಆಧಾರದ ಮೇಲೆ ಸ್ವಾಧೀನ ಕೊಡುವುದಾದರೆ, ಅದರಿಂದ ಈ ಬಡ ರೈತರೇನು ಇದ್ದಾರೆ, ಅವರ ತಲೆಯ ಮೇಲೆ ಹೊಸೆದ ಹಾಗೆ ಆಗುತ್ತದೆ. ನಮ್ಮ ತೀರ್ಥಹಳ್ಳಿ ತಾಲ್ಲೂಕಿನಲ್ಲಿಯ ಉದಾಹರಣೆಗಳನ್ನು ಜೇಕಾದರೆ ತಮಗೆ ಹೇಳುತ್ತೇನೆ. ಅಲ್ಲಿರತಕ್ಕಂತಹ ಕೆಲವು ಗೇಣೀದಾರರು 25 ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಿದ್ದರೂ, ಭೂಸುಧಾರಣಾ ಕಾನೂನು ಬರುವ ಹಂತದಲ್ಲಿ ಹಲವಾರು ವಕ್ಕಲುಗಳನ್ನು ಈ ಭೂಮಾಲೀಕರು ಎಬ್ಬಿಸಿದ್ದಾರೆ. ಈ ಕಾನೂನು ಬಂತು ಅಂದರೆ ಭೂಮಾಲೀಕರು ಪಹಣಿ ಆರ್ ಆರ್ ಮತ್ತಿತರ ರಿಕಾರ್ಡುಗಳನ್ನು ಹಿಡಿದು ಕೊಂಡು ಕೋರ್ಟಿನಲ್ಲಿ ಕೇಸ್ ಹಾಕಿ ಬಿಟ್ಟು ಇಂಜೆಂಕ್ಷನ್ ತೆಗೆದುಕೊಂಡು ಬಿಡುತ್ತಾರೆ. ಇಂಜೆಂಕ್ಷನ್ ತೆಗೆದುಕೊಂಡು ಬಂದ ಮೇಲೆ ಪೋಲೀಸರು ಸಹಾಯ ಕೊಟ್ಟೇ ಕೊಡುತ್ತಾರೆ. ಇಂತಹ ಸ್ವಾಧೀನ ಪದ್ಧತಿಯನ್ನು ನಾವು ಇಟ್ಟುಕೊಂಡು ಭೂಸುಧಾರಣೆಯನ್ನು ತರುವುದಾದರೂ ಹೇಗೆ ? ಈ ರೀತಿ ತರುವುದಾದರೆ ನಮಗೆ ದೇಶದಲ್ಲಿ ಹಂಚುವುದಕ್ಕೆ ಭೂಮಿ ಕೇವಲ 10-6 ಎಕರೆ ಸಿಗುತ್ತದೋ ಏನೋ. ಇವೊತ್ತಿನ ದಿವಸ ದೇಶದಲ್ಲಿ ಜಮೀನಿನ ಸಾಗುವಳಿ ರೈತ ಮಾಡುತ್ತಿದ್ದರೂ, ಆತನ ಹೆಸರಿನಲ್ಲಿ ಯಾವ ದಾಖಲೆಯೂ ಇರುವುದಿಲ್ಲ. ಆದ್ದರಿಂದ ಇವತ್ತು ಅವನ ರಕ್ಷಣೆಯನ್ನು ಯಾರು ಮಾಡುತ್ತಾರೆ ? ಇದನ್ನು ನಾವು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು.

ಇನ್ನೊಂದು ವಿಚಾರವೇನೆಂದರೆ, ಭೂ-ಮಾಲೀಕ ವರ್ಗದವರು ಹೇಳತಕ್ಕಂತಹ ಮಾತು. ನೀವು ಭೂಸುಧಾರಣೆ ಮಾಡುತ್ತೀರಿ, ಮತ್ತು ಭೂಮಿಯನ್ನು ರೈತನಿಗೆ ಕೊಡುತ್ತೀರಿ. ಆದರೆ ನಾಳೆ ಮೈಜ್ಞಾನಿಕ ರೀತಿಯಲ್ಲಿ ಬೇಸಾಯ ಮಾಡುವುದಕ್ಕೆ ಆತನಿಗೆ ಟೆಕ್ನಿಕಲ್ ನೋಹೌ ಇದೆಯೇ; ಮತ್ತು ಆತ ಯಾವ ರೀತಿ ಅಂಥ ಒಳ್ಳೆಯ ಭೂಮಿಯನ್ನು ಬೇಸಾಯ ಮಾಡುತ್ತಾನೆ? ಮತ್ತು ಇಂತಹ ಅಭಿವೃದ್ಧಿ ಮಾಡಿದಂತಹ ಭೂಮಿಯನ್ನು ಒಬ್ಬ ದಡ್ಡನಿಗೆ ಕೊಟ್ಟರೆ ದೇಶದಲ್ಲಿ ಆಹಾರದ ಅಭಾವ ಉಂಟಾಗುವುದಿಲ್ಲವೇ ? ಇತ್ಯಾದಿ ಮಾತುಗಳನ್ನು ಹೇಳುತ್ತಿದ್ದಾರೆ. ಇದರಲ್ಲಿ ಸ್ವಲ್ಪ ಸತ್ಯಾಂಶ ಇದ್ದರೂ ಅದನ್ನು ಪೂರ್ತಿಯಾಗಿ ಒಪ್ಪುವುದಕ್ಕಾಗುವುದಿಲ್ಲ. ಒಂದು ಉದಾಹರಣೆಯನ್ನು ಹೇಳುತ್ತೇನೆ. ತುಂಗಭದ್ರಾ ಎಡ ನಾಲೆಯ ಕೆಳಗೆ ಅನೇಕ ಜನರಿಗೆ ಜಮೀನು ಕೊಟ್ಟರು. ಆದರೆ ಜಮೀನು ತಗೆದುಕೊಂಡವರು ಕೇವಲ ನಾಲ್ಕು ವರ್ಷಸಹ ಅದನ್ನು ಇಟ್ಟುಕೊಳ್ಳಲಿಲ್ಲ. ಇದಕ್ಕೆ ಹಿನ್ನಲೆ ಏನಿದೆ? ಆ ಜಮೀನು ಸಾಗುವಳಿಗೆ ಚೀಟೀಗೆ ಅರ್ಜಿ ಹಾಕುವವರು ನಮ್ಮಂತಹ ನಿಮ್ಮಂತಹ, ಉಂಡು ಸುಖವಾಗಿರುವಂತಹ ಜನರು. ಯಾರದೋ ಬಡಪಾಯಿಯ ಹೆಸರಿನಲ್ಲಿ ಅರ್ಜಿ ಹಾಕಿಸಿ, ಸಾಗುವಳಿ ಚೀಟಿ ಬಂದ ತಕ್ಷಣ ಈತನಿಗೆ ಅದನ್ನು ಬರೆದುಕೊಡುವಂತೆ ಕರಾರ್ ಮಾಡಿಕೊಂಡಿರುತ್ತಾರೆ. ಈ ರೀತಿಯಲ್ಲಿ ವ್ಯವಹಾರಗಳು ನಡೆಯುತ್ತಿವೆ. ಇಂಥ ಜನರ ರಕ್ಷಣೆ ಮಾಡುವುದನ್ನು ನಾವು ಕಲಿಯದೆ ಹೋದರೆ ಅದು ಪುನರಾವರ್ತಿಯಾಗುತ್ತದೆ. ನಾವು ಜಮೀನು ಯಾವನಿಗೆ ಕೊಡುತ್ತೇವೋ, ಆತನು ಅದನ್ನು ಮುಂದೆ ಇಟ್ಟುಕೊಂಡು ಬರುವಂತೆ ವ್ಯವಸ್ಥೆ ಮಾಡಬೇಕು. ಆತನಿಗೆ ಬೇಕಾದ ಸಾಲ, ಮತ್ತು ಗೊಬ್ಬರದ ಸೌಲಭ್ಯಗಳನ್ನು ಸಹ ಒದಗಿಸಿಕೊಡಬೇಕು. ಜಮೀನನ್ನು ಯಾರಾದರೂ ತೆಗೆದುಕೊಂಡರೆ ಅವರು ಅದನ್ನು ಯಾವತ್ತೂ ಪರಭಾರೆ ಮಾಡಬಾರದು ಎನ್ನುವ ರೀತಿಯಲ್ಲಿವ್ಯವಸ್ಥೆ ಮಾಡಬೇಕು. ಆದರೆ ಇದಕ್ಕೆ ಪ್ರೊಪರ್ಟಿ ಆಕ್ಟಿನ ಸೆಕ್ಷನ್ 10 ಅಡ್ಡಿ ಬರುತ್ತದೆ. ಅದರಲ್ಲಿ ಅಬ್ಸಲೂಟ್ ಪ್ರೊಹಿಬಿಷನ್ ಈಸ್ ಪಾಯಿಡ್ ಎಂದು ಹೇಳುತ್ತದೆ. ಆದ್ದರಿಂದ ಆ ಪ್ರೊಪರ್ಟಿ ಆಕ್ಟಿನ ಸೆಕ್ಷನ್ 10ನ್ನು ಅಮೆಂಡ್‌ಮಾಡುವ ಹೊರತು ಯಾವ ರೀತಿಯಲ್ಲಿಯೂ ನಾವು ಇದನ್ನು ನಿಲ್ಲಿಸಲು ಆಗುವುದಿಲ್ಲ. ಆದ್ದರಿಂದ ನಾವು ಇನ್ನೊಬ್ಬರಿಗೆ ಕೊಟ್ಟ ಜಮೀನನ್ನು ಕೊಡಬಾರದು ಎನ್ನುವ ರೀತಿಯಲ್ಲಿ ಪ್ರೊಪರ್ಟಿ ಆಕ್ಟಿನ ಸೆಕ್ಷನ್ 10ಗೆ ತಿದ್ದುಪಡಿ ಮಾಡಿ ಇದನ್ನು ಸುಲಲಿತವಾಗಿ ಮಾಡುವಂತೆ ಪ್ರಯತ್ನ ಮಾಡಬೇಕು.

ಇವೊತ್ತು ಎಷ್ಟೋ ಕಡೆ ಚೆನೆಂಜಿನಿಂದ ಭೂ ಮಾಲೀಕರಿಂದ ಭೂಮಿಯನ್ನು ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಬುದ್ಧಿವಂತರಾದ ಭೂ ಮಾಲೀಕರು ಏನು ಮಾಡುತ್ತಾರೆ ಎಂದರೆ ಗೇಣಿ ಮಾಡತಕ್ಕ ರೈತನಿಂದ ಇನ್ನೊಬ್ಬ ರೈತನ ಹೆಸರಿಗೆ ಕ್ರಯ ಮಾಡಿಸುತ್ತಾರೆ. ಈ ರೀತಿಯಾಗಿ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಒಬ್ಬರ ಹೆಸರಿನಿಂದ ಇನ್ನೊಬ್ಬರ ಹೆಸರಿಗೆ ಗೇಣಿ ಹಕ್ಕನ್ನು ಕ್ರಯ ಮಾಡಿಸುವಂಥಾದ್ದು ಅವ್ಯಾಹತ ವಾಗಿ ನಡೆದುಕೊಂಡು ಬರುತ್ತಿದೆ. ಅದಕ್ಕೆ ಸರ್ಕಾರದವರು ಏನೂ ರಕ್ಷಣೆ ಕೊಟ್ಟಹಾಗೆ ಕಾಣುವುದಿಲ್ಲ. ತೀರ್ಥಹಳ್ಳಿ, ಹೊಸನಗರ ತಾಲ್ಲೂಕುಗಳಲ್ಲಿ ಜೆನ್ನಿ ರೈಟ್ಸನ್ನು ಕ್ರಯಕ್ಕೆ ತೆಗೆದುಕೊಳ್ಳುತಕ್ಕಂಥಾದ್ದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ಬಗ್ಗೆ ಸರ್ಕಾರ ಯಾವ ರೀತಿಯ ಎಚ್ಚರಿಕೆಯನ್ನು ತೆಗೆದುಕೊಂಡಿದೆಯೋ ಗೊತ್ತಿಲ್ಲ. ಕೆಲವರು ಗೇಣಿ ರೈತನಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಅವನಿಂದ ಜೆನ್ನಿಸ್ ಹಕ್ಕನ್ನು ಕೊಂಡುಕೊಳ್ಳುತ್ತಿದ್ದಾರೆ. ಆ ರೀತಿ ರೈತ ತನ್ನ ಜೆನ್ನಿಸ್ ಹಕ್ಕನ್ನು ಮಾರುವಾಗ ತನ್ನ ಮಕ್ಕಳ ಭವಿಷ್ಯವನ್ನೂ ಯೋಚನೆ ಮಾಡುವ ಶಕ್ತಿ ಅವನಿಗೆ ಇಲ್ಲ. ಅವನು ಅಂಧಕಾರದಲ್ಲಿದ್ದಾನೆ. ಜೆನ್ನಿಸ್ ಹಕ್ಕನ್ನು ಬಿಟ್ಟು ಕೊಡುವುದಕ್ಕೆ ಅವಕಾಶ ಇಲ್ಲ. ಈಗ ನಾವೇನು ಕಾನೂನು ಮಾಡಿದ್ದೇವೆ ಇದು ನ್ಯಾಯಾಲಯಕ್ಕೆ ಹೋದಾಗ ಈ ಕಾನೂನನ್ನು ರದ್ದು ಮಾಡುವುದಕ್ಕೆ ಅವಕಾಶ ಇದೆ. ಹೀಗೆ ಹತ್ತಾರು ವರ್ಷ ಜೆನ್ನಿಸ್ ರೈಟ್ಸನ್ನು ಮಾರಾಟ ಮಾಡುತ್ತಾ ಹೋದರೆ ರೈತನ ಕೈಯಲ್ಲಿ ಕೋಲು, ಕರಟ ಎರಡು ಮಾತ್ರ ಉಳಿಯುತ್ತದೆ. ಆದ್ದರಿಂದ ಈಗ ನಾವು ಮಾಡುವತಂಹ ಒಂದು ಕಾನೂನಿನಿಂದ ರೈತನಿಗೆ ಪ್ರತಿಫಲ ದೊರಕುವಂತೆ ಮಾಡಬೇಕು. ಸೆಕ್ಷನ್ 16ನ್ನು ಎಲ್ಲಿಯವರೆಗೆ ತೆಗೆದುಹಾಕುವುದಿಲ್ಲ ಅಲ್ಲಿಯವರೆಗೆ ಈ ಭೂಸುಧಾರಣಾ ಕಾನೂನು ಸರಿಯಾಗಿ ಜಾರಿಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು 10-20 ವರ್ಷಗಳಾದರೂ ಭೂ ಮಾಲೀಕ ಕೋರ್ಟಿನಲ್ಲಿ ವ್ಯಾಜ್ಯವನ್ನು ನಡೆಸುವುದಕ್ಕೆ ಬೆಂಬಲವನ್ನು ಕೊಟ್ಟಂತಾಗುತ್ತದೆ. ಅವನು ಹೈಕೋರ್ಟು ಮತ್ತು ಸುಪ್ರೀಮ್ ಕೋರ್ಟಿಗೆ ಹೋಗುತ್ತಾನೆ. ಈ ಭೂ ಸುಧಾರಣೆ ಕಾನೂನು ನಮ್ಮ ಕಾಲಕ್ಕೆ ಬರುವುದಿಲ್ಲ. ಇದು ನಮ್ಮ ಮಕ್ಕಳ ಕಾಲಕ್ಕೆ ಬರುತ್ತದೋ ಏನೋ ಗೊತ್ತಿಲ್ಲ.

ಸಣ್ಣ ಹಿಡುವಳಿದಾರರಿಗೆ ಒಂದು ಅರ್ಧ ಕ್ರಯ್ಷ್ ಕೊಟ್ಟು ಅವರಿಗೆ ಜೀವನೋಪಾಯಕ್ಕೆ ಅವಕಾಶ ಮಾಡಿಕೊಡಬೇಕು. ದೊಡ್ಡ ಹಿಡುವಳಿದಾರರಿಗೆ ಏನು ಕಾಂಪೆನ್‌ಸೇಷನ್ ಕೊಡಬೇಕೆಂದು ನಿರ್ಣಯ ಮಾಡಿದೆಯೋ ಅದರಲ್ಲಿ ಅರ್ಧ ಕ್ರಯ್ಷ್ ಕೊಟ್ಟು ಖರೀದಿ ಮಾಡಿ ಕಳುಹಿಸುವುದು ಒಳ್ಳೆಯದು. ಈಗ ಯಾವ ಭೂಮಾಲೀಕನಿಗೂ ತಾನು ಜಮೀನಾರ್ದಾರ ಎಂದು ಕರೆಸಿಕೊಳ್ಳುವುದಕ್ಕೆ ಇಚ್ಛೆ ಇಲ್ಲ, ಅವನು ಜಮೀನಾರ್ದಾರ ಎಂದು ಕರೆಸಿಕೊಳ್ಳುವುದಕ್ಕೆ ಅಸಹ್ಯಪಡುತ್ತಾನೆ. ಈಗ ಲ್ಯಾಂಡ್ ಲಾರ್ಡ್ಸ್ ಹೋಗಿದ್ದಾರೆ, ಲ್ಯಾಂಡ್ ಹೋಲ್ಡರ್ಸ್‌ಮಾತ್ರ ಇದ್ದಾರೆ. 5 ಎಕರೆ 10 ಎಕರೆ ಜಮೀನನ್ನು ಗೇಣಿಗೆ ಕೊಟ್ಟುಕೊಂಡು ಜೀವನ ಮಾಡತಕ್ಕವರಿಗೆ ಗೇಣಿಯೂ ಸಿಕ್ಕುತ್ತಿಲ್ಲ. ಅವರು ಇಷ್ಟು ವರ್ಷ ಕಂದಾಯವನ್ನು ಕೊಡದಿದ್ದರೆ ಆ ಜಮೀನಿನ ಹಕ್ಕುದಾರಿಕೆ ಹೋಗಿ ಅವರಿಗೆ ಕಾಂಪೆನ್‌ಸೇಷನ್ ಸಿಕ್ಕುತ್ತದೆಯೋ ಇಲ್ಲವೋ ಎಂದು ಹೆದರಿ ಅವರು ಕಂದಾಯವನ್ನು ಕಟ್ಟಿಕೊಂಡು ಬರುತ್ತಿದ್ದಾರೆ. ಇದೇ ರೀತಿ ಮುಂದುವರಿದುಕೊಂಡು ಹೋದರೆ ನಾಳೆ ಲ್ಯಾಂಡ್ ಲಾರ್ಡ್ ಎಂದು ಏನು ಕರೆಯುತ್ತಿದ್ದಾರೆ ಅವರ ಗತಿ ಏನು ? ಗೇಣಿಯ ಬಗ್ಗೆ ಅವರು ಕೋರ್ಟಿಗೆ ಹೋದರೂ ಅದು ತೀರ್ಮಾನವಾಗುವುದಿಲ್ಲ. ಅವರು ಕೋರ್ಟಿಗೆ ಹೋಗುವ ಹಾಗೆಯೂ ಇಲ್ಲ. ಏಕಕ್ಕೆಂದರೆ ಜಗನ್ನಾಥ ಶೆಟ್ಟರ ಗೇಣಿಯ ಅರ್ಜಿಯ ಬಗ್ಗೆ ತಹಶೀಲ್ದಾರರು ಈಲ್ಲನ್ನು ನಿರ್ಣಯ ಮಾಡದೆ ಇರುವುದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೈಕೋರ್ಟಿನಲ್ಲಿ ಅರ್ಜಿಯನ್ನು ವಜಾಮಾಡಿ ತೀರ್ಮಾನಕೊಟ್ಟಿದ್ದಾರೆ. ಇದನ್ನು ದೊಡ್ಡ ಮನುಷ್ಯರು ಯಾರೂ ಯೋಚನೆ ಮಾಡುತ್ತಿಲ್ಲ. ನಮ್ಮಂಥಾ ಶಾಸನಕರಿಗೇನೋ ಒಂದು ತಿಂಗಳಿಗೆ 400 ರೂಪಾಯಿ ಪಗಾರ ಬರುತ್ತದೆ, 25 ರೂಪಾಯಿ ಡೈಲಿ ಅಲೌಯೆನ್ಸ್ ಬರುತ್ತದೆ. ನಮಗೆ ಹೇಗೋ ನಡೆಯುತ್ತದೆ. ಕೇವರ ಗೇಣಿಯಿಂದಲೇ ಜೀವನ ಮಾಡತಕ್ಕವರ ಗತಿಯೇನು ? ತಹಶೀಲ್ದಾರರು ಈಲ್ಲನ್ನು ನಿರ್ಣಯ ಮಾಡದೇ ಇರುವುದರಿಂದ ಬಡ ಹಿಡುವಳಿದಾರರು ಬಾಣಿ ಪಡಬೇಕಾಗಿದೆ. ಅದನ್ನು ನಾವು ಯೋಚನೆ ಮಾಡಿದ್ದೇವೆ ಇವೊತ್ತ ನಾವು ಮಾಡತಕ್ಕಂಥಾ ಪಾಲಿಸಿ ಏನಿದೆ ಅದರಿಂದ ಜನಹಿತಸಾಧನೆಯಾಗಬೇಕಾಗಿದೆಯೇ ಹೊರತು ವರ್ಗ ನಿರ್ಮೂಣ ಮಾಡುವುದು ಮುಖ್ಯವಲ್ಲ. ಗೇಣಿದಾರರಿಗೆ ಭೂಮಿಯನ್ನು ಒದಗಿಸಿಕೊಟ್ಟು ಇನ್ನೊಂದು ವರ್ಗವನ್ನು ನಿರ್ಮಾಣ ಮಾಡಿದಂತಾಗುತ್ತದೆ. ಸಣ್ಣ ಹಿಡುವಳಿದಾರರಿಗೆ ಅನ್ಯಾಯ ವಾದರೆ ನಾಳೆ ಅವರು ವಿಧಾನ ಸೌಧದ ಮುಂದೆ ಬಂದು ಕುಳಿತುಕೊಳ್ಳುತ್ತಾರೆ. ಆದ್ದರಿಂದ ವರ್ಗ ನಿರ್ಮೂಲ ಎಂದರೆ ಎರೆಡುಕಡೆ ಕೂಡ ನಾವು ಸರಿಯಾದ ರೀತಿಯಲ್ಲಿ ಸರಿಯಾದ ಒಂದು ಮಾರ್ಗವನ್ನು ಅನುಸರಿಸದೇ ಹೋದರೆ ಮುಂದೆ ಕೊಂದರೆಯಾಗುತ್ತದೆ. ಈಗ ಸುಮಾರು 25 ವರ್ಷಗಳಿಂದಲೂ ಭೂಸುಧಾರಣೆ ಬರುತ್ತದೆ ಎಂದು ಹೇಳಿಕೊಂಡು ಬಂದಿದ್ದಾರೆ. ಆದರೆ ನಮ್ಮ ಸರ್ಕಾರ ಈಗ ಬಂದಿದೆ. ಹಿಂದಿನಿಂದಲೂ ಸರ್ಕಾರದವರು ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಡಿಸಿ

ಕೊಂಡು ಬಂದಂತಹ ಭೂಸುಧಾರಣೆಯನ್ನು ತರುತ್ತೇವೆ ಎಂದು ಹೇಳಿಕೊಂಡು ಬಂದು ಅದರ ಅಪರಾಧವನ್ನು ಇಪ್ಪತ್ತು ಹಿಡುವಳಿದಾರರು ಮತ್ತು ಗೇಣಿದಾರರು ಅನುಭವಿಸಬೇಕಾಗಿದೆ. ಆದ್ದರಿಂದ ಗೇಣಿದಾರ ಮತ್ತು ಹಿಡುವಳಿದಾರರೆ : ಒಬ್ಬರಿಗೂ ತೊಂದರೆಯಾಗದಂತೆ ಒಂದು ಸುಗ್ರೀವಾಜ್ಞೆಯನ್ನಾದರೂ ಹೊರಡಿಸಿ ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ ಹೊರತು ಭೂಸುಧಾರಣೆ ಒಂದು ತೀರ್ಮಾನಕ್ಕೆ ಬರುವುದಿಲ್ಲ. ಈ ಬಗ್ಗೆ ಯಾರಿಗೂ ಹೆದರ ಬೇಕಾಗಿಲ್ಲ. ಹಿಂದೆ ಮಹಾಭಾರತದಲ್ಲಿ ಅರ್ಜುನನು ಯುದ್ಧಕ್ಕೆ ಹೋದಾಗ ಅಲ್ಲಿ ಪಿತಾಮಹರು ಅಣ್ಣತಮ್ಮಂದಿರು ಇವರುಗಳನ್ನೆಲ್ಲಾ ನೋಡಿ ಇವರನ್ನೆಲ್ಲಾ ಹೇಗೆ ಕೊಲ್ಲಲಿ ಎಂದು ಅನುಕಂಪದಿಂದ ಹೇಳಿದಾಗ ಶ್ರೀಕೃಷ್ಣ ಪರಮಾತ್ಮನು ಧರ್ಮಯುದ್ಧದಲ್ಲಿ ಬಂಧುಬಳಗ, ಗುರುಗಳು ಯಾರನ್ನು ನೋಡುವ ಹಾಗಿಲ್ಲ, ಅನುಕಂಪ ಪಡಬೇಕಾಗಿಲ್ಲ. ನನ್ನ ನೀತಿ ನಿಲುವು ಸರಿಯಾಗಿದ್ದರೆ ನೀನು ಧೈರ್ಯದಿಂದ ಯುದ್ಧ ಮಾಡು ಎಂದು ಗೀತೋಪದೇಶವನ್ನು ಮಾಡಿದನಂತೆ. ಅದನ್ನು ನಮ್ಮ ನಾಯಕರು ನೆನಪಿನಲ್ಲಿಟ್ಟುಕೊಂಡು ಈ ಕಾನೂನನ್ನು ಮಾಡಬೇಕು. ನಾವು ಜನತೆಗೆ ಭೂಸುಧಾರಣೆಯನ್ನು ಮಾಡುತ್ತೇವೆ ಎಂದು ವಚನ ಕೊಟ್ಟು ಬಂದಿದ್ದೇವೆ. ಆದ್ದರಿಂದ ಇದನ್ನು ಏತಕ್ಕೆ ಮಾಡಲಿಲ್ಲ ಎಂದು ಜನತೆ ನಮ್ಮಮೇಲೆ ದೋಷಾರೋಪಣೆಯನ್ನು ಮಾಡುತ್ತಾರೆ. ನಾವು ಯಾವ ಒಂದು ನಿರ್ಣಯತೆಗೆದುಕೊಳ್ಳಬೇಕಾದರೂ ತೊಡಕುಗಳು ಇದ್ದೇ ಇರುತ್ತವೆ. ಆದ್ದರಿಂದ ನಮ್ಮ ಮನಸ್ಸಿಗೆ ನಮ್ಮ ಅಂತರಾತ್ಮಕ್ಕೆ ಯಾವುದು ಸರಿಯೆಂದು ಕಾಣುತ್ತದೆಯೋ ಅದರಲ್ಲಿ ಯಶಸ್ಸು ಇದ್ದೇ ಇರುತ್ತದೆ ಎಂದು ಹೇಳುವವರ ಪೈಕಿ ನಾನೂ ಒಬ್ಬ.

ಈಗ ಭೂಮಾಲೀಕರಾಗುವವರು ಭೂಮಿ ಇರುವ ಪ್ರದೇಶದಿಂದ 16 ಕಿಲೋಮೀಟರ್ ಒಳಗಡೆಯೇ ಇರಬೇಕೆಂಬ ವಿಧಿ ಇದೆ. ಅಬ್ಸೆಂಟೀ ಲ್ಯಾಂಡ್ ಇರಬಾರದು ಎನ್ನುವ ಆಧಾರದ ಮೇಲೆ ಇದನ್ನು ಹಾಕಿದ್ದಾರೆ. ಈ ತತ್ವವನ್ನು ನಾನು ಒಪ್ಪುತ್ತೇನೆ. ಭೂಮಿಯ ಮೇಲೆ ಸದಾ ವ್ಯವಸಾಯ ಮಾಡಿಕೊಂಡು ಇರಬೇಕೆಂದು ಆ ರೀತಿ ಮಾಡಿದ್ದಾರೆ. ಭೂ ಮಾಲೀಕ ಭೂಮಿ ಇರುವ ಪ್ರದೇಶದಿಂದ 16 ಕಿಲೋ ಮೀಟರ್ ದೂರದಲ್ಲಿದ್ದರೆ ಅವನು ಭೂಮಿಯನ್ನು ಇಟ್ಟುಕೊಳ್ಳಬಹುದು. 17 ಕಿಲೋ ಮೀಟರ್ ದೂರದಲ್ಲಿದ್ದರೆ ಅವನ್ನು ಭೂಮಿಯನ್ನು ಇಟ್ಟುಕೊಳ್ಳುವ ಹಾಗೆ ಇಲ್ಲ ಎಂದರೆ ಇದರ ಅರ್ಥ ನನಗೆ ಕಾಣುವುದಿಲ್ಲ. ಯಾರಿಗೆ ಜಮೀನು ಇಲ್ಲ ಅವರಿಗೆ ಜಮೀನು ಕೊಡಬೇಕು, ಯಾರು ಭೂಮಿಯನ್ನು ಉಳುತ್ತಾರೆ ಅವರಿಗೆ ಜಮೀನು ಕೊಡಬೇಕೆಂದು ನಿರ್ಣಯ ತೆಗೆದುಕೊಳ್ಳುವುದು ಸರಿ. ಅದು ಬಿಟ್ಟು 16 ಕೀಲೋ ಮೀಟರ್‌ಸ್‌ನೊಳಗೆ ಇರಬೇಕೆಂದು ಹೇಳುವುದು ಸರಿಯಲ್ಲ. ಯಾರು ತನ್ನ ಜಮೀನನ್ನು ಸ್ವತಃ ನಿಗಾ ಇಟ್ಟು ಸಾಗುವಳಿ ಮಾಡುತ್ತಾನೋ ಅಂತಹವನು ಇಪ್ಪತ್ತೇ ಕೀಲೋ ಮೀಟರ್ ದೂರದಲ್ಲಿ ಇರಬೇಕೆಂದು ಹೇಳುವುದು ಸರಿಯಿಲ್ಲ. ಮುಖ್ಯವಾಗಿ ಜಮೀನನ್ನು ತನ್ನ ತಲೆಯ ಮೇಲೆ ಯಾವನು ಇಟ್ಟುಕೊಂಡಿರುತ್ತಾನೋ ಅವನಿಗೆ ಮಾತ್ರ ಭೂಮಿ ಇರಬೇಕೆಂದು ಹೇಳುವವನು ನಾನು.

3-P.M.

ಪ್ರತಿ ಕುಂಟುಂಬದಲ್ಲಿರತಕ್ಕ ಒಬ್ಬ ಮೇಜರ್ ಸನ್‌ಗೆ ಮತ್ತೊಂದು ಹಿಡುವಳಿ ಮಿತಿ ಇರಬಹುದು ಎಂದು ಇಲ್ಲಿ ಹೇಳಲಾಗಿದೆ. ಈ ರೀತಿ ಅವಕಾಶ ಮಾಡಿಕೊಟ್ಟರೆ ಸರ್ಕಾರಕ್ಕೆ ಜಮೀನು ಸಿಗುವುದು ಬಹಳ ಕಡಿಮೆ. ನಾನು ಹಿಡುವಳಿದಾರರ ಪರವಾಗಿ ವಾದ ಮಾಡುವವನಾದರೂ ಸಹ ಸರ್ಕಾರದವರು ಯಾವ ಕಾನೂನನ್ನೆ ಜಾರಿಗೆ ತಂದರೂ ಸಹ, ಭೂಮಿ ಇಲ್ಲದ ಎಲ್ಲ ಜನರಿಗೂ ಭೂಮಿಯನ್ನು ಹಂಚುವುದಕ್ಕೆ ಬೇಕಾಗುವಷ್ಟು ಜಮೀನು ಇಂದು ನಮ್ಮಲ್ಲಿ ಇಲ್ಲ. ಆದರೂ ಉಳುವವನಿಗೇ ಭೂಮಿ ಸಿಗಬೇಕೆಂದು ನಾವು ಹೇಳುತ್ತಿರುವುದರಿಂದ, ಯಾರು ಅನುಚಾನವಾಗಿ ಹಿಂದಿನಿಂದ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೋ, ಅಂತಹವರಿಗಾದರೂ ಜಮೀನು ಕೊಡುವ ನೀತಿಯನ್ನು ಅನುಸರಿಸಿಕೊಂಡು ಬರಬೇಕಾಗುತ್ತದೆ. ಯಾರು ಈ ದೇಶದಲ್ಲಿ ಬಾಳ್ವೆ ನಡೆಸುವುದೇ ಕಷ್ಟವೆಂದು ತಮ್ಮ ಮನಸಿನಲ್ಲಿ ಅಂದುಕೊಂಡಿದ್ದರೋ, ಯಾರಿಗೆ ಸ್ವಂತ ಆಸ್ತಿ ಎಂಬುದೇ ಈ ದೇಶದಲ್ಲಿ ಇರಬಲ್ಲದೋ ಅಂತಹವರಿಗೆ ಜಮೀನು ಕೊಡುವುದರ ಮೂಲಕ ಧೈರ್ಯ ಕೊಡುವ ಕೆಲಸವನ್ನು ನಾವು ಅತಿ ಮುಖ್ಯವಾಗಿ ಮಾಡಬೇಕಾಗಿದೆ. ಈ ಒಂದು ನೀತಿಯನ್ನು ನಾವು ಅತಿ ಮುಖ್ಯವಾಗಿ ಅನುಸರಿಸಬೇಕಾಗಿದೆ. ಅವರು ಸಹ ಈ ಸಮಾಜದಲ್ಲಿ ಗಣ್ಯವ್ಯಕ್ತಿಗಳು ಎನಿಸಿಕೊಳ್ಳುವಂತೆ ಮಾಡಬೇಕಾಗಿದೆ. ತಮಗೂ ನಾಲ್ಕಾರು ಎಕರೆ ಜಮೀನು ಇದೆ, ತಾವೂ ಸಹ ಈ ದೇಶದ ಒಂದು ಅಂಗ, ತಮಗೂ ಜೀವನೋಪಾಯಕ್ಕೆ ಒಂದು ಮಾರ್ಗವಿದೆ ಎನ್ನುವಂತಹ ಒಂದು ಧೈರ್ಯವನ್ನು ಅವರಿಗೆ ಕಲ್ಪಿಸಿಕೊಡಬೇಕಾಗಿದೆ. ಎಲ್ಲರಿಗೂ ಜಮೀನನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ. ಎಲ್ಲರೂ ವ್ಯವಸಾಯವನ್ನೇ ಮಾಡಬೇಕು ಎಂದು ಹೇಳಿದರೆ, ಅದು ಒಳ್ಳೆಯ ರೀತಿಯ ಆರ್ಥಿಕ ವ್ಯವಸ್ಥೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಯಾಗುವುದಿಲ್ಲ. ಯಾವ ದೇಶದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಇರುವುದಿಲ್ಲವೊ, ಆ ದೇಶದ ಆರ್ಥಿಕ ವ್ಯವಸ್ಥೆ ನುಲಲಿತವಾಗಿರುವುದಿಲ್ಲ. ನಮ್ಮ ದೇಶದಲ್ಲಿ ಒಂದು ವಿಚಿತ್ರ ಪದ್ಧತಿ ಇದೆ. ಅದೇನೆಂದರೆ, ಉಳುವವನು ಒಬ್ಬನಾದರೆ, ಊಟ ಮಾಡುವವನೂ ಬೇರೊಬ್ಬನಾಗಿದ್ದಾನೆ. ಚೈನಾ ದೇಶದಲ್ಲಿಯೂ ಈ ಪದ್ಧತಿ ಇದೆ. ಹಿಂದೆ ರಷ್ಯಾ ದೇಶದಲ್ಲಿಯೂ ಇತ್ತಂತೆ. ಬಂಡವಾಳ ಷಾಹಿಯಾದ ಅಮೇರಿಕಾದಲ್ಲಿ ಈ ಪದ್ಧತಿ ಇಲ್ಲ.

ಶ್ರೀ ಎಚ್. ಡಿ. ದೇವೆಗೌಡ.—ನೀವು ಯಾವ ಯಾವ ದೇಶಗಳನ್ನು ನೋಡಿದ್ದೀರಿ ಮತ್ತು ಯಾವ ಯಾವ ದೇಶಗಳಲ್ಲಿ ಯಾವ ಯಾವ ಪದ್ಧತಿ ಇವೆ ಎಂಬುದನ್ನು ಹೇಳಿ.

ಶ್ರೀ ಎಸ್. ಎಂ. ಶೀರ್‌ನಾಳಿ ಚಂದ್ರಶೇಖರ್.—ನಾನು ಅನೇಕ ದೇಶಗಳನ್ನು ನೋಡಿದ್ದೇನೆ ಆದರೆ ಎಲ್ಲವನ್ನೂ ಹೇಳುವುದಕ್ಕೆ ಸಾಕಷ್ಟು ಸಮಯ ಇಲ್ಲ. ಮುಖ್ಯವಾಗಿ ಇನ್ನೊಬ್ಬರ ಹತ್ತಿರ ಗೇಯಿಸಿ ನಾವು ಊಟ ಮಾಡುವ ಪದ್ಧತಿಯನ್ನು ಏನು ಬೆಳೆಸಿಕೊಂಡು ಬಂದಿದ್ದೇವೆ, ಅದು ಮೊದಲು ಹೋಗಬೇಕು. ರಾಜಾ ಪ್ರತ್ಯಕ್ಷ ದೇವತಾ ಎಂದು ಹೇಳುವ ಜನರ ಮಾತ್ರ ಇದು ಹೋಗಬಾರದು ಎಂದು ಹೇಳುತ್ತಾರೆ. ಆದರೆ ಅವರಿಗೆ ಸರ್ಕಾರದವರು ಹೆದರಬಾರದು. ದನವನ್ನು ಕೊಂದು ತಿನ್ನುತ್ತಿದ್ದ ಇಗ್ಲೀಷ್ ಜನರನ್ನು ಕೆಲವರು ರಾಜರು ಎಂದು ಕರೆಯುತ್ತಿದ್ದರು. ಅವರ ಬೂಟ್ಸ್‌ನ್ನು ಪಾಲೀಷ್ ಮಾಡುತ್ತಿದ್ದರು. ಅಂತಹ ಒಂದು ಪದ್ಧತಿಯನ್ನು ನಾವು ಇನು ಮುಂದೆ ಅನುಸರಿಸಿಕೊಂಡು ಹೋಗುವುದು ಬೇಡ. ಈ ಒಂದು ಕ್ರಾಂತಿಕಾರಕವಾದ ಭೂಸುಧಾರಣೆಯನ್ನು ಆದಷ್ಟು ಬೇಗ ಜಾರಿಗೆ ತಂದರೆ ನಮಗೇ ಒಳ್ಳೆಯದು. ನಮಾಜಪಾದ ಎಂಬುದು ಈ ದೇಶದಲ್ಲಿ ಬರದೇ ಹೋದರೆ ಕ್ರಾಂತಿಯಾಗಬಹುದು. ಊಟ ಮಾಡಿಕೊಂಡಿರುವ ಜನರಿಗೆ ಗೇಣಿ ದಾರರು ಕಲ್ಲು ಹೊಡೆಯಬಹುದು. ಆದ್ದರಿಂದ ಕೂಡಲೇ ಏನಾದರು ವ್ಯವಸ್ಥೆ ಮಾಡದಿದ್ದರೆ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುವುದು ಕಷ್ಟವಾದೀತು, ನಮ್ಮ ನಾಯಕರು ಏನು ಆದೇಶ ಕೊಟ್ಟಿದ್ದಾರೆ, ಅದನ್ನು ಜಾರಿಗೆ ತರುವಂತಹ ಕೆಲಸ ಜಾಗ್ರತೆಯಾಗಬೇಕು. ಇಲ್ಲದಿದ್ದರೆ ಕ್ರಾಂತಿ ತಪ್ಪಿದ್ದಲ್ಲ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri N. B. SIRDESAI (Khanapur).—Madam Speaker, at the outset I must make it clear that I am not opposed to the national and State policy of imposing ceiling limit on agricultural land, but at the same time I must make it clear that I am going to oppose the proposed ceiling limit and some of the provisions of the Bill on certain worth-considering grounds. That is because some of the provisions of the Bill and the proposed ceiling limit, according to my opinion, are unjust, injudicious and would defeat the very purpose of the Government. I am going to touch only three points, *viz.*, the ceiling limit, the provisions of proposed Section 79A and the proviso to Clause 11 of Section 2 of the Original Act.

India's total labour force is roughly 210 millions out of which over 70 per cent is engaged in agriculture. Mostly they are landless labourers and they cannot be benefitted much or sooner from the changing pattern of cultivation. About 60 per cent of the farmers operate holdings less than two hectares and these farmers constitute about 30 per cent of the Indian rural labour force. The net area sown in the country is roughly 1.64 million acres and the net irrigated area is about 28.8 million hectares. Thus the scope of lower ceiling limit is limited only to 21 per cent of the cultivated land in the country.

[Mr. DEPUTY SPEAKER in the Chair]

It is stated that all the Chief Ministers have agreed in the Central Land Reforms Committee that not more than a million hectares will be available for releasing to the landless persons. This implies that even if one hectare is allowed to one family not more than a million people would be benefitted by lower land ceiling. Land reforms are quite essential for raising agricultural production and doing social justice. It is an agreed fact. But in no case can an uneconomic holding serve the national interest. Poverty would become perennial if all people want to depend on agriculture. Government must create different vocations for landless persons. The net result of lowering ceiling and releasing surplus lands would increase in more number of uneconomic holdings and these uneconomic holdings will be worse because surplus land will be unfit for cultivation and it will be beyond the means of an individual to develop the land. inspite of any amount of credit from nationalised banks given to him. If such uneconomic holdings are created the very purpose or entire operation of redistribution of land will be nullified and that is why I am told that many of the communist countries have after redistribution have proceeded to collectivise in large co-operatives. So, right from now this Government should encourage co-operative farming or collective farming instead of lowering the ceilings and creating uneconomic holdings. I am of the opinion that the proposed ceiling would reduce production and people will not take to agriculture.

For maintaining social equilibrium and maintaining a certain standard of living, ceiling must be viable unit and it must be sufficient, and economic unit. I fully agree that there is dire need for equitable distribution of agricultural land for removal of economic disparities. But we must at the same time consider the far reaching effects of lower ceilings. All aspects such as standard of living of the farmers and mechanisation of the agriculture and joint cultivation by agriculture firms and associations and co-operative societies and industrial units engaged in manufacturing agricultural implements such as tractors and power tillers and heavy ploughs, etc., will have to be considered. All these will be at a standstill if there is a lower ceiling. If agricultural holdings do not prove to be economical holdings the main goal will remain far and it would be harmful to the agricultural production and to the nation. I concede that the object of land reforms is mainly to increase production and do social justice. But we must see whether this objective will be fulfilled and will be fruitful by lower land ceiling. We must also consider the implication of law of inheritance and fragmentation of the land because of divisions amongst family members. While fixing ceiling limits we must take into consideration the net income of the farmers. There must be close relation of income derived

(SRI N. B. SIRDESAI)

from the farmer's lands. The net income of a farmer is a variable factor and it depends on a number of factors over which the farmer has no control. So the net income determined should be based on a scientific basis and realistic data. The net income must be such as to provide for his family reasonable standard of living enabling him to fulfil his social obligations, education of his children, marriage and other religious duties. Again the net income depends on the yearly yield. So if ceiling is fixed nobody would take to agriculture and there will be retrogression in production. Industries engaged in manufacturing agricultural implements such as tractors, heavy ploughs, power tillers, will be nowhere and their investment will go in vain. So, the ceiling must be suitable to local conditions and must be based on scientific basis.

I remember to have read that believing in the assurance given by the late Prime Minister Nehru many progressive farmers have invested a lot of money in installing I.P. sets, purchasing tractors and power tillers, etc. If the ceiling is lowered now, all the investment will go in vain. It should not be a political stunt. Just to make success the slogan *Garibi Hatao* ceiling should not be lowered. We must look into all aspects while fixing ceiling.

Now I would like to suggest the following proposals considering all aspects of possible partition of families ceiling should be fixed at 25 acres of I class land as against 10 acres.

Then as regards prohibition of holdings as proposed in Section 59-A, a person having income of more than Rs. 12,000 from other sources is not entitled to hold land. This provision is not proper and advisable and the period of five years prior to the commencement of this Act cannot be made applicable because economies of a family is based on different alternative sources. If one source goes the man can take up another source and maintain himself and his family. It is quite clear that business income cannot be constant because of the ever changing policies of the Government. So I think the very purpose of the Government in lowering down the ceiling limit would be defeated. The Government of Maharashtra have fixed the ceiling limit of 18,000 rupees and the person exceeding that limit is entitled to hold the land which is already in his possession. This provision is more rational and it should be adopted by this Government also.

Then as regards the proviso with regard to personal cultivation is absured and redundant. Many persons have settled at different places and at distant places for education purpose and business purposes. If this proviso is accepted then they will have to give up their education, business or profession. This proviso is therefore unwarranted and it must be deleted from the Bill.

For encouraging joint cultivation the existing agricultural associations and co-operative societies must be encouraged under the present Act because as I have already stated that many of the Communist countries have encouraged co-operative farming. Now after fixing up the ceilings there will be fragmentation of a number of economic holdings and it is quite possible that again the Government will have to pass a legislation to consolidate these land holdings. Therefore, right now, the Government should encourage the agricultural associations and co-operative societies which are carrying on agriculture farming on co-operative basis and they should be exempted from the ceiling limit.

Further, this Government has not followed the guidelines given by the Congress High Command. The income limit of 12,000 rupees and 16 kms. of residential restrictions are not there in the directions given by the Congress High Command. Further they have said that the Act should come into force in 1971, but this Government has put the clock back by 10 years and have said that some of the provisions should come into force from 1961. This Government has also ignored the need to protect Dairy Farming and hilly and forest areas for which exemption should have been granted. The land belonging to religious and charitable institutions must also be exempted to meet the ends of social justice.

Then it is said that out of 60 lakhs acres of resumable land only about 41 lakh acres is uncultivable and hence useless for redistribution. So the very purpose of redistribution of land will be defeated by lowering down the ceiling limit. It should be a viable unit and fixed to 25 acres of Class I land.

With these words I conclude and thank the Chair.

† ಶ್ರೀ ಕೆ. ಎನ್. ವೀರಪ್ಪ ಗೌಡ (ಶ್ಯಂಗೇರಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಭೂ ಸುಧಾರಣೆ ವಿಷಯ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಸ್ನೇಹಿತರು ಅನೇಕ ರೀತಿಯಲ್ಲಿ ಮಾತನಾಡಿದ್ದಾರೆ. ನಾನಾದರೂ ಕೂಡ ಕಾಂಗ್ರೆಸ್ ಪಕ್ಷದವನಾಗಿ ಆ ಪಕ್ಷ ಏನು ತೀರ್ಮಾನವನ್ನು ಕೈಕೊಳ್ಳುತ್ತದೆ ಆ ತೀರ್ಮಾನಕ್ಕೆ ಒಳಗಾಗಿರತಕ್ಕ ಮನುಷ್ಯ. ಹೈ ಕಮ್ಯಾಂಡ್‌ನವರು ಸ್ಪಾಭಾವಿಕವಾಗಿ 10ರಿಂದ 18 ಎಕರೆಯಷ್ಟು ಮಿತಿ ಇರಬೇಕು ಎನ್ನುವ ತೀರ್ಮಾನ ಮಾಡಿದ್ದಾರೆ. ಆ ತೀರ್ಮಾನಕ್ಕೆ ಒಳಪಟ್ಟು ಮಾತನಾಡತಕ್ಕದ್ದು ಅಗತ್ಯವೆಂದು ಭಾವಿಸಿದ್ದೇನೆ. ಜೊತೆಗೆ ನಾನು ಮಾತನಾಡುವಾಗ, ನಾನು ದೊಡ್ಡ ಜಮೀನ್ದಾರ, ನಾನು ಭೂ ಸುಧಾರಣೆಯನ್ನು ವಿರೋಧಿಸ ಬಹುದು ಎಂದು ಯಾರಾದರೂ ಭಾವಿಸಿದರೆ ಕಷ್ಟವಾಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪ ನವರು ಮಾತನಾಡುತ್ತ ಅವರಿಗೆ ವ್ಯವಸಾಯದಲ್ಲಿ ಇರತಕ್ಕ ಸಂಬಂಧವನ್ನು ಪ್ರಸ್ತಾಪ ಮಾಡಲಿಲ್ಲ. ನಾನು ಕಾಂಗ್ರೆಸ್ಸಿನವನಾಗಿ ಅದನ್ನೆಲ್ಲಾ ಹೇಳದೆ ಇದ್ದರೆ ತಪ್ಪಾಗುತ್ತದೆ. ನನಗೆ ಒಂದು ಎಕರೆ 24 ಕುಂಟೆ ಗೇಣಿ ಬಾಗಾಯಿತು ಇದೆ, ಮಾರು ಎಕರೆ ಗೇಣಿ ತರಿ ಇದೆ, ಎರಡು ಎಕರೆ 21 ಕುಂಟೆ ಬಾಗಾಯಿತು ಸ್ವಂತವಿದೆ, ನಾಲ್ಕು ಎಕರೆ 20 ಕುಂಟೆ ಸ್ವಂತ ತರಿ ಇವೆ, ಒಂದು ಎಕರೆ 30 ಕುಂಟೆ ಖುಷ್ಕಿ ಇದೆ. ಒಟ್ಟಿನಲ್ಲಿ ಹಾಕಿದರೆ ಸುಮಾರು 13 ಎಕರೆ 18 ಕುಂಟೆ ಜಮೀನು ಬರುತ್ತದೆ. ಇದೆಲ್ಲವೂ ಕೂಡ ಮಳೆ ತರಿ? ನನಗೆ ಏನಾದರೂ ತೊಕ್ಕ ಬರುತ್ತದೆನ್ನುವ ದೃಷ್ಟಿಯಿಂದ ಮಾತನಾಡಿದರು ಎನ್ನುವುದಕ್ಕೆ ಅವಕಾಶವಿರಬಾರದೆಂದು ನನಗೆ ಇರತಕ್ಕ ಜಮೀನಿನ ವಿಷಯದಲ್ಲಿ ಮೊದಲು ಪ್ರಸ್ತಾಪ ಮಾಡಬೇಕಾಗಿ ಬಂದು ಆ ದೃಷ್ಟಿಯಲ್ಲಿ ಮಾತಾಡುತ್ತಿದ್ದೇನೆ.

ಶ್ರೀಮಾನ್ ತಿಮ್ಮಪ್ಪನವರು ಮಾತನಾಡುತ್ತ ಜಮೀನಿನ ವ್ಯವಸಾಯದ ವಿಷಯದಲ್ಲಿ ಬಹಳ ವಾಗಿ ಹೇಳಿದರು. ಚೆನ್ನಾಗಿ ವ್ಯವಸಾಯ ಮಾಡಿದರೆ ಎಷ್ಟು ಬೇಕಾದರೂ ಬೆಳೆ ತೆಗೆಯುವುದಕ್ಕೆ

(ಶ್ರೀ ಕೆ. ಎನ್. ವೀರಪ್ಪಗೌಡ)

ಸಾಧ್ಯವೆಂದು ಹೇಳಿದರು. ಮಾಡಿ ನೋಡಿದ್ದೇನೆ ಎಂದು ಹೇಳಿಲ್ಲ. ನನಗೆ ಅನ್ನಿಸುತ್ತದೆ, ಅವರು ಮೊದಲನಿಂದಲೂ ಎಸ್, ಎಸ್. ಪಿ. ಯಲ್ಲಿದ್ದಾರೆ. ಆ ಪಕ್ಷದ ನೀತಿಯ ಬಗ್ಗೆ ಅವರೂ ಮತ್ತು ಶ್ರೀ ಕೋಣಂದೂರು ಲಿಂಗಪ್ಪನವರೂ ಮಾತನಾಡಿಕೊಂಡು ಹೋಗುತ್ತಿದ್ದಾರೆ. ಅವರು ಮಾತನಾಡುವಾಗ ತಮ್ಮ ಅನುಭವವನ್ನು ಹೆಚ್ಚಾಗಿ ಹೇಳಲಿಲ್ಲ. ಬಹುಶಃ ಇಬ್ಬರೂ ಅಡ್ವೋಕೇಟ್ ಆಗಿದ್ದಾರೆ. ಸುಮಾರು 23-24 ವರ್ಷದವರೆಗೂ ವಿದ್ಯಾಭ್ಯಾಸ ಮಾಡಿದ್ದಾರೆ. ನಾನು ಕೋಣಂದೂರು ಲಿಂಗಪ್ಪನವರ ಮನೆಗೆ ಹೋಗಿ ನೋಡಿದ್ದೆನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ಮನೆಗೂ ಹೋಗಿ ನೋಡಿದ್ದೇನೆ. ಈ ವ್ಯವಸಾಯದ ಬಗ್ಗೆ ನನ್ನ ಸ್ವಂತ ಅನುಭವದ ಮೇಲೆ ಹೇಳುತ್ತೇನೆ. ಅವರಿಗೆ ಈ ಜಮೀನಿನಲ್ಲಿ ಎಷ್ಟು ಅನುಭವ ಇದೆ ಎನ್ನುವುದನ್ನು ಹೇಳಬೇಕು.

3-30 P M.

ಶ್ರೀ ಕಾಗೋಡು ತಿಮ್ಮಪ್ಪ.—ನನ್ನ ಜೊತೆಗೆ ಜಮೀನಿಗೆ ಬಂದರೆ ನಮಗೆ ಅದರಲ್ಲಿ ಎಷ್ಟರ ಮಟ್ಟಿಗೆ ಅನುಭವ ಇದೆ ಎನ್ನುವುದನ್ನು ತೋರಿಸಿ ಕೊಡುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಬಹಳಮಟ್ಟಿಗೆ ಅವರು ಹೇಳಿದ್ದಾರೆ ಏನೆಂದರೆ 5 ಎಕರೆ ಇದ್ದರೂ ಕೂಡ ಅವನು ಸುಖವಾಗಿ ತನ್ನ ಜೀವನವನ್ನು ಮಾಡಬಲ್ಲ ಎಂದು. ಇದರಿಂದ ಎಷ್ಟರ ಮಟ್ಟಿಗೆ ನಾವು ಜೀವನ ಮಾಡಬಹುದು ಎನ್ನುವುದನ್ನು ಹೇಳಲಾ. ಅವರು ಬಹುಶಃ ತಮ್ಮ ಜಮೀನುಗಳನ್ನು ಮಾಡುತ್ತಿದ್ದಾರೋ ಇಲ್ಲವೋ ನಮಗೆ ಗೊತ್ತಿಲ್ಲ. ಅಡ್ವೋಕೇಟ್ ಕೆಲಸ ಎಂಥಾದ್ದು ಎಂದರೆ ಅದು ಯಾರಿಗೂ ಲೆಕ್ಕಕ್ಕೆ ಸಿಕ್ಕಲ್ಲದೇ ಇರುವ ಉತ್ಪತ್ತಿ, ಎಂದು ತಿಳಿದುಕೊಂಡಿದ್ದೇನೆ. 12 ಸಾವಿರ ರೂಪಾಯಿ ಬಂದರೂ ಗೊತ್ತಾಗುವುದಿಲ್ಲ, 10 ಸಾವಿರ ರೂಪಾಯಿ ಬಂದರೂ ಗೊತ್ತಾಗುವುದಿಲ್ಲ. ಅವರು ಬಹಳಮಟ್ಟಿಗೆ ಭೂಸ್ವಾಮಿಗಳು, ಭೂಸ್ವಾಮಿಗಳು ಎಂದು ಹೇಳುವಾಗ ನಾವು ಭೂಸುಧಾರಣೆಯನ್ನು ಜಾರಿಗೆ ತಂದೇ ತರಬೇಕಾಗುತ್ತದೆ. ಈಗ 10 ರಿಂದ 18 ಎಕರೆಯವರೆಗೆ ಅಥವಾ 18 ಎಕರೆಯೊಳಗೆ ನಿಗದಿ ಮಾಡಬೇಕು ಎನ್ನುವುದನ್ನು ಒಪ್ಪಿಕೊಳ್ಳೋಣ. ಅವರು ಭೂಸ್ವಾಮಿಗಳಬಗ್ಗೆ ಮಾತನಾಡುವ ಸಂದರ್ಭದಲ್ಲಿ ಭೂಸ್ವಾಮಿಗಳು ಇದನ್ನು ಲಪಟಾಯಿಸಿಕೊಂಡಿದ್ದಾರೆ ಎನ್ನುವ ರೀತಿಯಲ್ಲಿ ಮಾತನಾಡಕ್ಕಂಥಾದ್ದು ಸರಿಯಲ್ಲ. ಭೂಸ್ವಾಮಿಗಳ ಕೈಯಿಂದ ಜಮೀನುಗಳನ್ನು ತೆಗೆದುಕೊಳ್ಳಬೇಕು, ಇದನ್ನು ಮಾಡಬೇಕಾದರೆ ಆ ಊರಿನಲ್ಲಿ ಶಾಂತಿ ಬೆಳೆಯಬೇಕು, ನಾವು ಆ ಜಮೀನುಗಳನ್ನು ಯಾರಿಗೆ ಕೊಟ್ಟರೂ ಅವರು ಅನ್ಯೋನ್ಯದಿಂದ ಬಾಳಬೇಕು. ಭೂಸ್ವಾಮಿಗಳನ್ನು ವಿರೋಧಿಸತಕ್ಕಂಥಾದ್ದು ಏನು ಇದೆ ಅದು ಅಷ್ಟು ವಿಹಿತವಲ್ಲ. ಆ ಜಮೀನಿನಲ್ಲಿ ವ್ಯವಸಾಯ ಹೇಗೆ ಮಾಡಬೇಕು ಎನ್ನುವುದು ಬಹುಶಃ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆಯೋ ಇಲ್ಲವೊ ಗೊತ್ತಿಲ್ಲ. ನಾವು ಈ ಮನೆಯ ಸದಸ್ಯರಾಗಿ ಬಂದಾಗ ಪ್ರಮಾಣ ವಚನವನ್ನು ಸ್ವೀಕರಿಸಿದ್ದೇವೆ. ನಾವು ಯಾವಾಗಲೂ ನಿಜವನ್ನೇ ಹೇಳಬೇಕು. ನಾನು ನನ್ನ ಜಮೀನಿನಲ್ಲಿ ವ್ಯವಸಾಯ ಮಾಡಬೇಕಾದರೆ, ಗೊಬ್ಬರ ಹೊತ್ತಿದ್ದೇನೆ, ಉತ್ತಿದ್ದೇನೆ ಎಲ್ಲಾ ಕೆಲಸವನ್ನೂ ಮಾಡಿದ್ದೇನೆ ಮತ್ತು ಇದಲ್ಲದೆ ಪಕ್ಕದ ಮನೆಯವರು ಬೆಳಗಾಗೆದ್ದು ಕತ್ತಿ ಮಸೆಯುವುದು. ಅವರಿಗೆ ಕೇಳಿದರೆ ಅವರು ಮೊದಲು ಹೋಗುತ್ತಾರೆ ಎಂದು ಮೊದಲು ನಾನು ಹೋಗಿ ತರಬೇಕು ಎಂಬ ಹೊಟ್ಟೆಪೋಟಿಯಿಂದ ನಾನು ಕಾಡಿಗೆ ಹೋಗಿ ಎರಡು ಹೊರೆ ಸೊಪ್ಪು ತರುತ್ತಾ ಇದ್ದೆ. ಇವೆಲ್ಲಾ ಕೆಲಸವನ್ನು ಮಾಡಿದ್ದೇನೆ. ನೀವು ಹೇಳಿದ ರೂಪದಲ್ಲಿ ಪುಸ್ತಕದ ಬದನೆಕಾಯಿ ರೂಪದಲ್ಲಿ ಅಲ್ಲ. ಈ ಜಮೀನಿನ ವ್ಯವಸಾಯ ಯಾವರೀತಿ ಎನ್ನುವುದನ್ನು ಚೆನ್ನಾಗಿ ಅರ್ಥಮಾಡಿಕೊಂಡು ಒಳ್ಳೆಯ ಸೂಕ್ತವಾದ ಸಲಹೆ ಮಾಡಬೇಕು. ಈ ವಿಷಯದಲ್ಲಿ ನನಗೆ ಚೆನ್ನಾಗಿ ಗೊತ್ತಿರುವುದರಿಂದ ಹೇಳಬೇಕಾಗಿದೆ. ಇದರ ಬಗ್ಗೆ ಮೊದಲು ಯೋಜನೆ ಮಾಡಬೇಕು. ದೇಶದ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಜನರೆಲ್ಲರೂ ಕೂಡ ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳುವ ರೀತಿಯಲ್ಲಿ ಕೆಲಸ ಮಾಡಬೇಕು. ಅದು ಬಿಟ್ಟು ಎಕರೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ದೇಶದಲ್ಲಿರತಕ್ಕಂಥ ಎಲ್ಲಾ ಜನರಿಗೂ ಕೊಡುತ್ತೇವೆ ಎಂದು ಭಾಗಕಾರ ಹಾಕಿಕೊಂಡು ಪ್ರತಿಯೊಬ್ಬರಿಗೂ 34 ಕುಂಟೆ ಬರುತ್ತದೆ, ಕೊಟ್ಟುಬಿಡಿ ಎಂದು ಹೇಳುವಪ್ರಶ್ನೆ ಅಲ್ಲ. ಎಷ್ಟು ಲಿಮಿಟ್ ಹಾಕಿದರೂ ಕೂಡ ಎಷ್ಟು ಜನಕ್ಕೆ ಸಿಕ್ಕಬೇಕೋ ಅಷ್ಟು ಜನಕ್ಕೆ ಮಾತ್ರ ಸಿಕ್ಕುತ್ತದೆ. ಇನ್ನೂ ಕಡಿಮೆ ಲಿಮಿಟ್ ಹಾಕಿದರೆ ಇನ್ನೂ ಹೆಚ್ಚು ಜನಕ್ಕೆ ಸಿಕ್ಕುತ್ತದೆ. ಈ ರೀತಿಯಾಗಿ ಲೆಕ್ಕಾಚಾರ ಹಾಕಿಕೊಳ್ಳುತ್ತೀರಿ. ಆದರೆ ಎಷ್ಟು ಜಮೀನು ಇದ್ದರೆ ಎಷ್ಟು ಉತ್ಪತ್ತಿ ಬರುತ್ತದೆ ಎನ್ನುವ ಲೆಕ್ಕಾಚಾರ ಹಾಕಿರಲ್ಲಾ. ನಮ್ಮ ಮೈಸೂರು ದೇಶ ಆಲ್ ಇಂಡಿಯಾ ಲ್ಯಾಂಡ್ ಕ್ಲಾಸಿಫಿಕೇಷನ್‌ನಲ್ಲಿ 6ನೇ ಕ್ಲಾಸ್‌ಗೆ ಬರುತ್ತದೆ.

ಆದ್ದರಿಂದ ನಮ್ಮ ಮೈಸೂರು ರಾಜ್ಯದಲ್ಲಿ 10 ಎಕರೆಗಿಂತ ಹೆಚ್ಚಾಗಿ ಬಿಟ್ಟುಕೊಡಬೇಕಾಗುತ್ತದೆ ಎಂದು ಸ್ವಾಭಾವಿಕವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಇದು ಬಿಟ್ಟು ತಾವು ಫಾರಿನ್ ಕಂಟ್ರೀಸ್ ಲೆಕ್ಕ ತೆಗೆದುಕೊಂಡರೆ ಅದನ್ನು ಪುನ್ಕದ ಬದನೆಕಾಯಿ ರೂಪದಲ್ಲಿ ಬರೆದು ಇಟ್ಟಿದ್ದಾರೆ.. ತಾವು ನಮ್ಮ ದೇಶದ ಮಣ್ಣಿನ ಪರಿಸ್ಥಿತಿ, ಹವಾಮಾನದ ಪರಿಸ್ಥಿತಿ ಲೆಕ್ಕಾಚಾರ ಹಾಕಿಲ್ಲ, ಅಮೇರಿಕಾ ದೇಶದಲ್ಲಿ ಹೆಚ್ಚು ಜಮೀನು ಇದ್ದು ಕೂಡ ಅವರು ಆಹಾರ ಧಾನ್ಯದ ಉತ್ಪಾದನೆ ಬಗ್ಗೆ ಯಾವ ರೀತಿ ಸಂಶೋಧನೆ ನಡೆಸುತ್ತಿದ್ದಾರೆ ಎನ್ನುವುದು ಗೊತ್ತಿದೆಯೋ? ಅವರು ತಮಗೂ ಆಗಿ ಪರದೇಶಗಳಿಗೂ ಆಹಾರಧಾನ್ಯಗಳನ್ನು ಕಳುಹಿಸಿ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಅದನ್ನು ತಾವು ಯೋಚನೆ ಮಾಡಿಲ್ಲಾ. ಈಗ ಭೂಸುಧಾರಣೆ ಬಗ್ಗೆ ಪ್ರಸ್ತಾಪ ತಂದಿದ್ದೀರಿ. ಈಗ 2 ಜೆಳೆ ಆಗತಕ್ಕಂಥಾದ್ದು 10 ಎಕರೆಯನ್ನು ಒಬ್ಬ ರೈತ ಇಟ್ಟುಕೊಳ್ಳಬಹುದು ಎಂದು ಹೇಳಿದಮೇಲೆ ದೇಶದಲ್ಲಿ ಆಹಾರ ಬೆಳೆಯ ಎಷ್ಟು ಎಷ್ಟು ಕಡಿಮೆಯಾಗಿದೆ ಎನ್ನುವುದನ್ನು ನೋಡಿ. ಈಗ ದೇಶದಲ್ಲಿ ಬಂದಿರತಕ್ಕಂಥ ಫುಡ್ ಪ್ರಾಬ್ಲಮ್ಸ್‌ನಿಂದ ಈ ಅಂಕಿಸಂಖ್ಯೆ ಗೊತ್ತಾಗುತ್ತದೆ. ಒಂದು ವರ್ಷದ ಹಿಂದೆ ನಾನು ತಾಲ್ಲೂಕು ಸೊಸೈಟಿ ಪ್ರೆಸಿಡೆಂಟ್ ಆಗಿದ್ದೆ. ಆವಾಗ ನಮ್ಮ ಹತ್ತಿರ ಸುಮಾರು 3000 ಕ್ವಿಂಟಾಲ್ ಅಷ್ಟು ಇದ್ದ ಭತ್ತವನ್ನು ಸರ್ಕಾರದವರು ಬಡವರಿಗೆ ಮಾರಾಟ ಮಾಡಿದ್ದಾರೆ. ಕೇವಲ ಒಂದು ವರ್ಷದಲ್ಲಿ ಈ ರೀತಿ ಒಂದು ಫುಡ್ ಪ್ರಾಬ್ಲೆಮ್ಸ್‌ಗೆ ತೊಂದರೆ ಆಗಿರುವುದಕ್ಕೆ ಕಾರಣ ಏನು ಎನ್ನುವುದು ಗೊತ್ತಾಗುತ್ತದೆ.

DISCUSSION ON A MATTER OF URGENT PUBLIC IMPORTANCE FOR SHORT DURATION

re : Irregularities in regard to Cultural Activities as part of Dasara Celebrations at Mysore:

Mr. DEPUTY SPEAKER.—We shall continue the discussion tomorrow. We shall go to the next item of the agenda, *viz.*, "Discussion on matter of urgent public importance for short duration under Rule 59.

Sri H. SIDDAVEERAPPA.—Will that be in order to go to the next item on the agenda ?

Mr. DEPUTY SPEAKER.—I have already told my difficulty.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳು ದಯಮಾಡಿಸಿದ್ದಾರೆ. ಇದು ಮುಖ್ಯಮಂತ್ರಿಗಳಿಗೂ ಸಂಬಂಧಪಟ್ಟದ್ದೆ. ರಾ ಅಂಡ್ ಅರ್ಡರ್ ಪ್ರಾಬ್ಲಮ್ ಬರುತ್ತದೆ ಪೋಲೀಸ್ ಇಲ್ಲಿ ಬರುತ್ತದೆ. ಇವರಿಗಿಂತ ಜಾಸ್ತಿ ಮುಖ್ಯಮಂತ್ರಿಗಳದ್ದು ಇದೆ. ಏತಕ್ಕೆ ಅವರು ಬರಲಿಲ್ಲ ? ಬೇರೆ ಕೆಲಸ ಇರಬೇಕೆಂದು ಕಾಣುತ್ತದೆ. ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದ ಜನತೆ ಒಂದು ರೀತಿಯಲ್ಲಿ ತಳಮಳಕ್ಕೆ ಒಳಗಾದಂತ ಪ್ರಾಮುಖ್ಯ ವಾದಂತಹ ಪ್ರಶ್ನೆ ಇದು. ಇದು ನತ್ಯಾಂಶವಾದ ಪ್ರಶ್ನೆ. ಬಹುಶಃ ದಸರಾ ಉತ್ಸವ ತಾವು ಕೇಳಿದ್ದೀರಿ. ಅದು ನಡೆದಂತಹ ವೈಖರಿ, ಭೂಷಣ ಎಲ್ಲಾ ತಾವು ನೋಡಿದ್ದೀರಿ. ಬಹುಶಃ ದಸರಾ ಸಮಿತಿಯಲ್ಲಿ ಒಂದು ಉಪಸಮಿತಿ ಯಾವಾಗಲೂ ಮಾಡತಕ್ಕದ್ದು ಇದೆ. ಕಲೆಗೋಸ್ಕರ ಸಂಬಂಧಪಟ್ಟದ್ದು. ಸಾಂಸ್ಕೃತಿಕವಾಗಿ ಏರ್ಪಡಿಸತಕ್ಕ ಕಾರ್ಯಕ್ರಮವನ್ನು ಏರ್ಪಡಿಸುವುದಕ್ಕೆ ಒಬ್ಬರ ಮೇಲೆ ಜವಾಬ್ದಾರಿಯನ್ನು ಹೊರೆಸಿ, ಒಬ್ಬ ಅಧ್ಯಕ್ಷರನ್ನು ನಾಮಕರಣ ಮಾಡತಕ್ಕದ್ದು ಮೊದಲಿನಿಂದ ನಡೆದು ಬಂದ ಪದ್ಧತಿ. ಈ ಪದ್ಧತಿ ಬಗ್ಗೆ ನನ್ನದು ಆಕ್ಷೇಪಣೆ ಇಲ್ಲ. ಯಾರು ಅಧ್ಯಕ್ಷರು ಆಗಬೇಕು ಎನ್ನುವ ವಿಷಯದಲ್ಲಿ ನನ್ನದು ಪ್ರಮುಖವಾದ ಆಕ್ಷೇಪಣೆ ಮೊದಲು ಹೇಳಿಬ್ಬೇನೆ. ಅಲ್ಲಿ ನಡೆದ ಘ ದುರಂತ ಘಟನೆ ಹೇಳುತ್ತೇನೆ. ಹಿಂದೆ ಈ ಸಮಿತಿಯಲ್ಲಿರತಕ್ಕ ಸದಸ್ಯರುಗಳು ಮತ್ತು ಅಧ್ಯಕ್ಷರು ಯಾರು ಇರುತ್ತಿದ್ದರೋ ಅವರು ಸಂಪೂರ್ಣವಾಗಿ ನೂರಕ್ಕೆ 70 ಭಾಗ ಕಲಾವಿದರು ಇರುತ್ತಿದ್ದರು. ಅನೇಕ ಜನ ದೊಡ್ಡ ದೊಡ್ಡ ಹಿರಿಯ ಕಲಾವಿದರು ಅಂದರೆ ಗುಬ್ಬಿವೀರಣ್ಣ, ಚೌಡಯ್ಯ, ದೇವೇಂದ್ರಪ್ಪ ಇವರುಗಳು ಇದ್ದರು ಇವರೆಲ್ಲರೂ ಕಲಾವಿದರು. ಇದು 100ಕ್ಕೆ ನೂರು